

# ಗೌತಮಿ ರೀ ಎಂಟ್ರಿ

**'ಸತ್ಯ' ಧಾರಾವಾಹಿ ಖ್ಯಾತಿಯ ನಟಿ ಗೌತಮಿ ಜಾಧವ್ ಸಿನಿಮಾರಂಗದೆಡೆಗೆ ಮರಳಿದ್ದಾರೆ. ನಟ ರಿಷಿ ಜೊತೆ 'ಮಂಗಳಾಪುರಂ' ಸಿನಿಮಾದಲ್ಲಿ ಅಭಿನಯಿಸುತ್ತಿದ್ದು, ಕಿರುತೆರೆ ಹಾಗೂ ಬೆಳ್ಳಿತೆರೆಯ ಅನುಭವಗಳನ್ನು ಹಂಚಿಕೊಂಡಿದ್ದಾರೆ.**

**■ ಸುಮಲತಾ ಎನ್.**

**◆ ಸಿನಿಮಾರಂಗಕ್ಕೆ ಮರಳಿದ್ದೀರಿ. ಹೇಗನ್ನಿಸುತ್ತಿದೆ?**

ಈ ಹಿಂದೆ ನಾಲ್ಕು ಸಿನಿಮಾದಲ್ಲಿ ನಟಿಸಿದ್ದೆ. ಕಿನಾರೆ, ಲೂಟಿ, ಆಧ್ಯ ಎಂಬ ಕನ್ನಡ ಸಿನಿಮಾಗಳು ಹಾಗೂ ತಮಿಳಿನಲ್ಲಿ ಒಂದು ಸಿನಿಮಾ ಮಾಡಿದ್ದೆ. ಹತ್ತು ವರ್ಷಗಳ ಬಳಿಕ ಈಗ ಮತ್ತೆ ಮರಳುತ್ತಿರುವುದಕ್ಕೆ ಖುಷಿ ಇದೆ. ಈ ವರ್ಷಗಳಲ್ಲಿ ಸಿನಿಮಾಗಳನ್ನು ಮಾಡದಿದ್ದರೂ ಸಿನಿಮಾಗಳ ರೂಪುರೇಷೆಗಳನ್ನು ಗಮನಿಸುತ್ತಲೇ ಬಂದಿದ್ದೇನೆ. ಸಿನಿಮಾರಂಗ ಹೇಗೆ ಬೆಳೆಯುತ್ತಿದೆ, ಗುಣಮಟ್ಟ, ಮೇಕಿಂಗ್‌ನಲ್ಲಿ ಏನೆಲ್ಲ ಬದಲಾವಣೆಗಳಾಗಿವೆ ಇವುಗಳನ್ನು ನೋಡಿಕೊಂಡು ಬಂದಿದ್ದೆ. ಅವನ್ನೆಲ್ಲ ಮನಸ್ಸಿನಲ್ಲಿಟ್ಟುಕೊಂಡು ಸಿನಿಮಾಗೆ ಬಂದಿದ್ದೇನೆ. ಇದೂ ಹೊಸ ಅನುಭವ.

**◆ 'ಮಂಗಳಾಪುರಂ' ಸಿನಿಮಾ ಹಾಗೂ ನಿಮ್ಮ ಪಾತ್ರದ ಕುರಿತು...**

ನಿರ್ದೇಶಕರು ಕಥೆಯನ್ನು ನಿರೂಪಿಸಿದ ರೀತಿ, ಚಿತ್ರಣವನ್ನು ಕಟ್ಟಿಕೊಟ್ಟ ರೀತಿ ಬಹಳ ಹಿಡಿಸಿತು, ಕಥೆ ತುಂಬಾ ಇಷ್ಟವಾಯಿತು. ಹೀರೊ, ಹೀರೋಯಿನ್ ಹೊರತಾಗಿ ಕಥೆಯೇ ಮುಖ್ಯ ಹೀರೊ ಎನ್ನಬಹುದು. ಸಿನಿಮಾದಲ್ಲಿ ನನ್ನದು ಸುಕನ್ಯಾ ಎನ್ನುವ ಪಾತ್ರ. ಸರಳವಿದ್ದರೂ ಕಥೆಯನ್ನು ಸಾಗಿಸುವಂಥ, ಕಥೆಗೆ ಸಮಾನಾಂತರವಾಗಿ ಹೋಗುವ ಪಾತ್ರ ಎಂಬ ಕಾರಣಕ್ಕೆ ಮನಸೆಳೆಯಿತು.

**◆ ಈಗಲೂ ಜನ 'ಸತ್ಯ' ಎಂದೇ ಗುರುತಿಸುತ್ತಾರಾ?**

ಕಿರುತೆರೆಯಿಂದ ಪಡೆದದ್ದು ಜನರ ಪ್ರೀತಿ. ನಾಲ್ಕು ಸಿನಿಮಾಗಳನ್ನು ಮಾಡಿದ್ದರೂ, ನನ್ನನ್ನು ಜನರು ಇಷ್ಟಪಡಲು ಆರಂಭಿಸಿದ್ದೇ 'ಸತ್ಯ' ಧಾರಾವಾಹಿಯಲ್ಲಿ. ಕಿರುತೆರೆ ನನಗೆ ಹಿಟ್ ಕೊಟ್ಟಿತು. ನನ್ನನ್ನು 'ಸತ್ಯ' ಎಂದೇ ಕರೆಯುತ್ತಾರೆ. ಕಿರುತೆರೆ ತುಂಬಾ ಸುಲಭವಾಗಿ ಪ್ರತಿಯೊಬ್ಬರ ಮನೆಗೂ ನಮ್ಮನ್ನು ಕರೆದುಕೊಂಡು ಹೋಗುತ್ತದೆ. ಜನರೊಂದಿಗೆ ಕನೆಕ್ಟ್ ಆಗುವಂತೆ ಮಾಡುತ್ತದೆ.

**◆ ಬಿಗ್ ಬಾಸ್ ಕೊಟ್ಟ ಅನುಭವ?**

'ಸತ್ಯ' ಧಾರಾವಾಹಿಯಿಂದಲೇ ಬಿಗ್‌ಬಾಸ್‌ಗೆ ಬಂದಿದ್ದು. ಅದು ತುಂಬಾ ಸುಂದರ ಅನುಭವ. ನಾನು ಸ್ವಲ್ಪ ಅಂತರ್ಮುಖಿ. ಅಷ್ಟು ಜನರ ಮಧ್ಯೆ ಇರಲು ನನಗೆ ಆಗುತ್ತಾ ಅಂದುಕೊಂಡಿದ್ದೆ. ಆದರೆ ಫಿನಾಲೆವರೆಗೂ ಹೋದದ್ದು ಬಹಳ ಖುಷಿಯಾಯಿತು. ಬಿಗ್‌ಬಾಸ್ ನನಗೆ ಒಂದು ಉತ್ತಮ ವೇದಿಕೆಯಾಯಿತು. ಅಲ್ಲಿಂದ ಇನ್ನೊಂದಷ್ಟು ಪ್ರೀತಿ ಸಿಕ್ಕಿತು. ನನ್ನನ್ನು ಗುರುತಿಸುವುದು ಹೆಚ್ಚಾಯಿತು.

**◆ ಕಿರುತೆರೆ– ಸಿನಿಮಾದಲ್ಲಿ ಯಾವ ಪಾತ್ರದಲ್ಲಿ ಕಾಣಿಸಿಕೊಳ್ಳುವ ಹಂಬಲವಿದೆ?**

ಸವಾಲು ಎನಿಸುವ ಪಾತ್ರಗಳನ್ನು ಮಾಡಬೇಕು ಎಂಬ ಆಸೆಯಿದೆ. 'ಸತ್ಯ' ಧಾರಾವಾಹಿ ನನಗೆ ಅಂಥದ್ದೊಂದು ಪಾತ್ರವನ್ನು ನೀಡಿತ್ತು. ಅದಕ್ಕಿಂತ ಭಿನ್ನವಾದ, ಚಾಲೆಂಜಿಂಗ್ ಆದ ಪಾತ್ರ ಮಾಡಬೇಕು. ದೇವರು– ದೇವತೆಗಳ ಕಥೆ ಇರುವಂಥ ಸೀರಿಯಲ್ ಅಥವಾ ಸಿನಿಮಾದಲ್ಲಿ ನಟಿಸಬೇಕು ಎನ್ನುವ ಹಂಬಲ ಬಹಳ ದಿನಗಳಿಂದ ಕಾಡುತ್ತಿದೆ. ಅದು ಯಾವಾಗ ಸಾಧ್ಯವಾಗುವುದೋ ನೋಡಬೇಕು.

**◆ ಸದ್ಯದ ಯೋಜನೆಗಳು...**

ಸದ್ಯ 'ಮಂಗಳಾಪುರಂ' ಸಿನಿಮಾಗೆ ಸಿದ್ಧತೆಗಳು ನಡೆಯುತ್ತಿವೆ. ಅದರಲ್ಲಿಯೇ ಸಂಪೂರ್ಣವಾಗಿ ತೊಡಗಿಕೊಂಡಿದ್ದೇನೆ. ಜನರಿಗೆ ಈ ಸಿನಿಮಾ ಬಹಳ ಇಷ್ಟವಾಗುತ್ತದೆ ಎಂಬ ನಂಬಿಕೆಯಿದೆ. ■